ಮಾಡಿದ್ದಾರೆ. ಅವರಿಗೆ ಬೇರೆ ಯಾವುದೇ ದಾರಿ ಇರಲಿಲ್ಲ.

(ಆ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿಗೆ ನ್ಯಾಯ ಬೆಲೆ.

+ಶ್ರೀ ಜೆ.ಬಿ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆ ಈ ರಾಜ್ಯದಲ್ಲಿ ಇರತಕ್ಕಂಥ ಕಾರ್ಖಾನೆಗಳಲ್ಲಿ ಕಬ್ಬು ಅರೆಯುವಂಥ ಕಾರ್ಯವನ್ನು ಪ್ರಾರಂಭ ಮಾಡಲು ಮೊದಲು ಇರತಕ್ಕಂಥದ್ದನ್ನು ತಾವು ತಿಳಿಸಿದ್ದೀರಿ ಎಂದು ಭಾವನೆ ಮಾಡಿಕೊಂಡಿದ್ದೇನೆ. ಇಲ್ಲಿ ಮಾನ್ಯ ಸಕ್ಕರೆ ಸಚಿವರು ಇದ್ದಾರೆ. ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಇದುವರೆಗೂ ನಡೆದುಕೊಂಡು ಬಂದಿರುವ ಪದ್ಧತಿ ಏನು ಎಂದರೆ ಕಬ್ಬು ಅರೆಯುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಮೊದಲು ಅಲ್ಲಿಯ ಆಡಳಿತ ಮಂಡಳಿಯವರು ಅಲ್ಲಿರತಕ್ಕಂಥ ಜನ ಪ್ರತಿನಿಧಿಗಳು ಸೇರಿ ಒಂದು ಬೆಲೆಯನ್ನು ನಿಗದಿ ಮಾಡತಕ್ಕಂಥ ಒಂದು ಪದ್ಧತಿ ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದು ಇತ್ತು ಮಾನ್ಯ ಸಭಾಧ್ಯಕ್ಷರೆ. ಆದರೆ ಈ ಸಾರಿ ಅಲ್ಲಿಯ ಆಡಳಿತ ಮಂಡಳಿಯವರು ಜನ ಪ್ರತಿನಿಧಿಗಳ ಜೊತೆ ಮೀಟಿಂಗ್ ಮಾಡಿದರು. ಅದು ಅಪೂರ್ಣವಾಗಿ ಸರ್ಕಾರದ ಮುಂದೆ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳತಕ್ಕಂಥ ಪ್ರಸ್ತಾವನೆ ಬಂತು. ಆದರೆ ಎರಡು ಸಾರಿ ಅದನ್ನು ಕರೆದರೂ ಆ ಮೀಟಿಂಗ್ ನಡೆಯಲಿಲ್ಲ. ಆದರೆ ಈಗ ಆಡಳಿತ ಮಂಡಳಿಯವರು ತಾತ್ಕಾಲಿಕವಾಗಿ ರೂ.750ಎಂದು ರೇಟನ್ನು ಘೋಷಣೆ ಮಾಡಿದ್ದಾರೆ. ಆದರೆ ಇತರೆ ಕಾರ್ಖಾನೆಗಳನ್ನು ಹೋಲಿಸಿದರೆ ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಡಿಸ್ಟಿಲರಿ ಇರತಕ್ಕಂಥದ್ದು ಹಾಗೂ ಅಲ್ಲಿ ಕಬ್ಬನ್ನು ಬೆಳೆಯುವ ಪ್ರಮಾಣ ಕೂಡ ಹೆಚ್ಚಿಗೆ ಇಲ್ಲ. ಆದಕಾರಣ ಅಲ್ಲಿಯ ಜನ ಪ್ರತಿನಿಧಿಗಳನ್ನು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಒಂದು ಬೆಂಬಲ ಬೆಲೆಯನ್ನು ಕೊಡಬೇಕು ಎನ್ನತಕ್ಕಂಥದ್ದು ಮಾನ್ಯ ಸಚಿವರಿಗೆ ಗೊತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ ಇನ್ನು ಎರಡು ದಿವಸ ಏನು ಅಧೀವೇಶನ ಇದೆ ಅದಕ್ಕೆ ಮೊದಲು ಆ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಬರತಕ್ಕಂಥ ರೈತ ಪ್ರತಿನಿಧಿಗಳು, ಜನಪ್ರತಿನಿಧಿಗಳು ಇವರನ್ನು ಕರೆದು ತಮ್ಮ ಮೂಲಕ ಒಂದು ಪ್ರೋತ್ಸಾಹ ಬೆಲೆಯನ್ನು ನಿಗದಿ ಮಾಡಿದರೆ ನಮಗೆ ಉತ್ತಮವಾಗಿ ಕಬ್ಬು ಸರಬರಾಜು ಆಗುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ನಾನು ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. ಇಲ್ಲದಿದ್ದರೆ ಕಳೆದ ವರ್ಷ ಏನು ನಮ್ಮ ನೀರಾವರಿ ಇಲಾಖೆಯಿಂದ ಐದು ಟಿ.ಎಂ.ಸಿ. ನೀರನ್ನು ನಿಲ್ಲಿಸಿದ್ದರಿಂದ ನಮಗೆ ಕಬ್ಬಿನ ಪ್ರಮಾಣ ಇಲ್ಲ ಬೆಳೆ ಇಲ್ಲ. ಆದಕಾರಣ ದಯಮಾಡಿ ನಾವು ಅಕ್ಕಪಕ್ಕದ ಜಿಲ್ಲೆಯಿಂದ ನಾವು ಕಬ್ಬನ್ನು ಪಡೆದುಕೊಳ್ಳಬೇಕಾಗಿದೆ, ಆದಕಾರಣ ನೀವು ಉತ್ತಮವಾದ ಬೆಳೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿಸಿಕೊಂಡು, ಇನ್ನೆರಡು ದಿವಸದಲ್ಲಿ ಆ ಪ್ರದೇಶದ ಜನರನ್ನು ಕರೆದು ಮಾತನಾಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಕಬ್ಬಿನ ಬೆಳೆಗೆ ಕೇಂದ್ರ ಸರ್ಕಾರ ಶಾಸನ ಬದ್ಧ ಬೆಲೆಯನ್ನು ನಿಗದಿ ಪಡಿಸುತ್ತದೆ. ಶೇ.8.5 ಇಳುವರಿ ಆಧಾರಿತ ಈ ಕನಿಷ್ಠ ಬೆಲೆಯನ್ನು ರಾಷ್ಟ್ರದ ಪ್ರತಿ ಒಂದು ಕಾರ್ಖಾನೆಯೂ ಕೊಡಲು ಕಾನೂನು ಪ್ರಕಾರ ಬದ್ಧವಾಗಿರುತ್ತದೆ.

ಕೇಂದ್ರ ಸರ್ಕಾರ ನಿಗದಿ ಪಡಿಸುವ ಶಾಸನ ಬದ್ಧ ಬೆಲೆ ಕಡಿಮೆ ಇರುವುದನ್ನು ಮನಗಂಡ ರಾಜ್ಯ ಸರ್ಕಾರ ಪ್ರತಿ ವರ್ಷವೂ ಕಬ್ಬಿಗೆ ತನ್ನ ಸಲಹಾ ಬೆಲೆ (ಎಸ್‌ಎಪಿ)ಯನ್ನು ನಿಗದಿ ಮಾಡಿಸುತ್ತಾ ಬಂದಿದೆ. ಈ ರಾಜ್ಯ ಸಲಹಾ ಬೆಲೆ ಕೇಂದ್ರ ಸರ್ಕಾರದ ನಿಗದಿಪಡಿಸುವ ಬೆಲೆಗಿಂತ ಯಾವಾಗಲೂ ಜಾಸ್ತಿ ಇರುತ್ತದೆ.

1997-98ನೇ ಸಾಲಿನ ಹಂಗಾಮಿಗೆ ಸಂಬಂಧಿಸಿದಂತೆ ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು ಜುಲೈ ತಿಂಗಳಲ್ಲಿ ಕಬ್ಬು ನುಲುಸಿವಿಕೆಯನ್ನು ಆರಂಭಿಸಿರುವುದರಿಂದ ರಾಜ್ಯ ಸರ್ಕಾರ ತಾರೀಖು 25-7-97ರ ಪ್ರಕಟಣೆ ಮೂಲಕ ಗೇಟ್ ಕಬ್ಬಿಗೆ ಟನ್ ಒಂದಕ್ಕೆ ರೂ.700 ಹಾಗೂ ಹೊಲದ ಕಬ್ಬಿಗೆ (ಎಕ್ಸ್-ಫೀಲ್ಡ್) ಟನ್ ಒಂದಕ್ಕೆ ರೂ.625ರಂತೆ ಮುಂಗಡ ನಿಗದಿಪಡಿಸಿತ್ತು. ಜೊತೆಗೆ, ಅಂತಿಮ ರಾಜ್ಯ ಸಲಹಾ ಬೆಲೆಯನ್ನು ನಿಗದಿಪಡಿಸಲು ತಾ: 27-8-97 ರಂದು ಉನ್ನತ ಮಟ್ಟದ ಸಮಿತಿ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿತ್ತು.

ಈ ಉನ್ನತ ಮಟ್ಟದ ಸಮಿತಿಯ ಸಭೆ ಜರುಗುವುದರೊಳಗಾಗಿ ರಾಜ್ಯ ಸಲಹಾ ಬೆಲೆಯನ್ನು ನಿಗದಿ ಪಡಿಸುವುದರ ವಿರುದ್ಧ ಖಾಸಗಿ ಸಕ್ಕರೆ ಕಾರ್ಖಾನೆಗಳು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದವು. ರಾಜ್ಯ ಸರ್ಕಾರವು ತಾರೀಖು 25-7-97ರಂದು ನಿಗದಿ ಪಡಿಸಿದ್ದ ಮುಂಗಡ ಬೆಲೆಗೂ ತಡೆಯಾಜ್ಞೆ ಬಂದಿತು. ಹೀಗಾಗಿ ರಾಜ್ಯ ಸಲಹಾ ಬೆಲೆಯನ್ನು ನಿಗದಿ ಪಡಿಸಲು ಸಾಧ್ಯವಾಗಲಿಲ್ಲ.

ಇದಕ್ಕೆ ಮೊದಲು ಅಲಹಾಬಾದ್ ಉಚ್ಚ ನ್ಯಾಯಾಲಯವು ತಾರೀಖು 11-12-96 ಆದೇಶದ ಮೂಲಕ ರಾಜ್ಯ ಸರ್ಕಾರಕ್ಕೆ ಕಬ್ಬಿನ ಬೆಳೆಗೆ ಬೆಲೆ ನಿಗದಿ ಪಡಿಸುವುದಕ್ಕೆ ಕಾನೂನಿನ ಪ್ರಕಾರ ಅವಕಾಶವಿಲ್ಲ ಶುಗರ್. ಕೇನ್ ಕಂಟ್ರೋಲ್ ಆರ್ಡರ್ ಪ್ರಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿರುತ್ತದೆ, ಎಂದು ಆದೇಶ ಹೊರಡಿಸಿತ್ತು. ಈ ಆದೇಶದ ವಿರುದ್ಧ ಶ್ರೇಷ್ಠ ನ್ಯಾಯಲಯದಲ್ಲಿ ಮೇಲ್ ಮನವಿ ಮಾಡಿ ಉತ್ತರ ಪ್ರದೇಶದ ಸರ್ಕಾರವು ತಡೆಯಾಜ್ಞೆ ಕೋರಿದಾಗ ರಾಜ್ಯ ಸಲಹಾ ಬೆಲೆ ನಿಗದಿಪಡಿಸಲು ಕಾನೂನಿನ ಆಧಾರ ಕಂಡುಬರುವುದಿಲ್ಲವೆಂದು ಶ್ರೇಷ್ಠ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದಿಲ್ಲ.

ಸಕ್ಕರೆ ಉದ್ಯಮದ ಬಗ್ಗೆ ಅಲಹಾಬಾದ್ ಉಚ್ಚ ನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರವು ಶ್ರೀ ಮಹಾಜನ ಆಯೋಗವನ್ನು ರಚಿಸಿದೆ. ಕಬ್ಬಿಗೆ ನ್ಯಾಯಾಬೆಲೆ

ನಿಗದಿ ಪಡಿಸುವ ಅಂಶವನ್ನು ಒಳಗೊಂಡಂತೆ ಹಲವಾರು ವಿಷಯಗಳ ಬಗ್ಗೆ ಈ ಆಯೋಗ ವರದಿ ನೀಡಬೇಕಾಗಿದೆ.

ಮೈಸೂರು ಸಕ್ಕರೆ ಕಾರ್ಖಾನೆಯು ದಿನಾಂಕ 18-8-97ರಂದು ಕಬ್ಬು ನುರಿಸುವಿಕೆಯನ್ನು ಆರಂಭಿಸಿದೆ. ಮುಂಗಡವಾಗಿ ರಾಜ್ಯ ಸರ್ಕಾರ ಟನ್ ಒಂದಕ್ಕೆ ರೂ.700 ರಂತೆ ಪ್ರಕಟಿಸಿತ್ತು. ಬೆಲ್ಲದ ಹೆಚ್ಚಿನ ಬೆಲೆ ಇದ್ದು ಕಾರ್ಖಾನೆಗೆ ಅಗತ್ಯ ಪ್ರಮಾಣದ ಕಬ್ಬು ಪೂರೈಕೆ ಆಗದಿರುವುದರಿಂದ ಕಾರ್ಖಾನೆಯ ಹೆಚ್ಚಿನ ದರ ನೀಡಬೇಕೆಂಬ ಬೇಡಿಕೆ ಇದೆ. ಆದರೆ, ಕಾರ್ಖಾನೆ ತನ್ನ ಆರ್ಥಿಕ ಪರಿಸ್ಥಿತಿ , ಆದಾಯ -ವೆಚ್ಚ ಆಧಾರದ ಮೇಲೆ ಬೆಲೆ ನೀಡಬೇಕಾಗಿದೆ. ಈಗಾಗಲೇ ರೂ.750 ಅನ್ನು ಕೊಡಲು ಕಾರ್ಖಾನೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ಖುದ್ದಾಗಿ ಭಾಗವಹಿಸಿ ದರ ನಿಗದಿ ಪಡಿಸುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶವಿರುವುದಿಲ್ಲ. ಕಾರ್ಖಾನೆ ಹಾಗೂ ರೈತರ ನಡುವೆ ಕಬ್ಬಿನ ದರದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು (ಅಗ್ರೀಡ್ ಪೈಸ್) ಲಿಂಕ್ ಇದೆ. ಒಂದು ವೇಳೆ ಕಾರ್ಖಾನೆ ಮತ್ತು ಕಬ್ಬು ಬೆಳೆಗಾರರ ನಡುವೆ ಒಪ್ಪಂದ ಏರ್ಪಡದಿದ್ದರೆ ಸರ್ಕಾರ ಮಧ್ಯ ಪ್ರವೇಶಿಸಿ ರೈತರು ಮತ್ತು ಕಾರ್ಖಾನೆಗಳೆರಡರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡ ಕ್ರಮವಿಡುವುದು. ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಇದಕ್ಕೆ ರೇಟ್ ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಏನು ಮನವಿಯನ್ನು ಕೊಟ್ಟಿದ್ದಾರೆ, ಆ ಸಲುವಾಗಿ ನಾನು ಇನ್ನೊಮ್ಮೆ ಮೀಟಿಂಗ್ ಕರೆದು ಅದರಲ್ಲಿ ಅಧ್ಯಕ್ಷರನ್ನು, ಎಂ.ಡಿ.ಯವರನ್ನು ಮತ್ತು ಆ ವ್ಯಾಪ್ತಿಗೆ ಬರುವಂಥ ರೈತ ಪ್ರತಿನಿಧಿಗಳನ್ನು ಮತ್ತು ಶಾಸಕರುಗಳನ್ನು ಕರೆದು ರೇಟ್ ಫಿಕ್ಸ್ ಮಾಡಿ ಆದೇಶವನ್ನು ಕೊಡುತ್ತೇವೆ. ಆ ಪ್ರಕಾರ ನಾವು ಆ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ. ಅದು ಆಗದೇ ಇದ್ದರೆ, ಸರ್ಕಾರ ಮಧ್ಯೆ ಪ್ರವೇಶಿಸಿ ರೇಟ್ ಫಿಕ್ಸ್ ಮಾಡಲು ಪ್ರಯತ್ನ ಮಾಡುತ್ತದೆ.

(ಇ) ವಿಷಯ: ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ನಾಮಫಲಕಗಳನ್ನು ಕಿತ್ತು ಹಾಕುವುದು.

+ ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿನ ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ನಗರದ ಆಯುಕ್ತರು ಅವೆನ್ಯೂ ರಸ್ತೆಯಲ್ಲಿರುವ ನಾಮ ಫಲಕಗಳನ್ನು ಹೊಡೆಸಿದ್ದಾರೆ, ಅಂಗಡಿಗಳವರಿಗೆ ಬಹಳ ನಷ್ಟವನ್ನುಂಟುಮಾಡಿದ್ದಾರೆ, ಕೆ.ಇ.ಬಿ ಕನೆಕ್ಷನ್ಸ್ ಮತ್ತು ಟೆಲಿಫೋನ್ ಕನೆಕ್ಷನ್ಸ್ ಕಿತ್ತಾಕಿಸಿದ್ದಾರೆ. ಅಂಗಡಿಗಳ ಕಟ್ಟಡಗಳನ್ನು ಡ್ಯಾಮೇಜ್ ಮಾಡಿಸಿದ್ದಾರೆ. ನಾಮಫಲಕಗಳನ್ನು ಹೊಡೆದು ಹಾಕುವುದಕ್ಕೆ ನಗರಪಾಲಿಕೆಯಿಂದ ಯಾವುದೇ ಸೂಚನೆಯನ್ನು ಮೊದಲೇ ಕೊಟ್ಟಿಲ್ಲ. ನಾಮಫಲಕ ಹಾಕಿಕೊಂಡಿದ್ದವರು ಈಗಾಗಲೇ ಕಾರ್ಪೊರೇಶನ್‌ಗೆ ಅಭಿವೃದ್ಧಿ ಶುಲ್ಕವನ್ನು ಕಟ್ಟಿ, ಜಾಹಿರಾತು ವಿಭಾಗದವರಿಂದ ಅನುಮತಿಯನ್ನು ಪಡೆದು ಹಾಕಿರುತ್ತಾರೆ. ಅದನ್ನೂ